ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1953
2	ಸದಸ್ಯರ ಹೆಸರು	ಡಾ|| ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	16.03.2022
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಭೂ ಸರ್ವೆ ಅರ್ಜಿ ಶುಲ್ಕ ವನ್ನು ಹೆಚ್ಚಳ ಮಾಡಿರುವುದರಿಂದ ಭೂಮಾಲೀಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;	ಬಂದಿದೆ. ಮೋಜಣಿ ವ್ಯವಸ್ಥೆಯಡಿ ಸಾರ್ವಜನಿಕರು 11ಇ ನಕ್ಷೆ, ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ ಹಾಗೂ ಹದ್ದುಬಸ್ತು ಕೋರಿ ಸಲ್ಲಿಸುವ ಅರ್ಜಿಗಳಿಗೆ ಈ ಹಿಂದೆ ನಿಗಧಿಪಡಿಸಿದ್ದ ಶುಲ್ಕವನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 238 ಎಸ್ಎಸ್‌ಸಿ 2021, ದಿನಾಂಕ:23-12-2021 ಹಾಗೂ ದಿನಾಂಕ:19-1-2022 ರಲ್ಲಿ ಕೆಳಕಂಡಂತೆ ಪರಿಷ್ಕರಿಸಲಾಗಿತ್ತು.
ಆ)	ಶುಲ್ಕ ಹೆಚ್ಚಳಕ್ಕೆ ಯಾವ ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ;	
ಇ)	ಶುಲ್ಕ ಹೆಚ್ಚಳಕ್ಕೆ ಕಾರಣಗಳೇನು; (ಮಾಹಿತಿ ಒದಗಿಸುವುದು)	

ಅರ್ಜಿಯ ವಿಧ	ಪರಿಮಿತಿ	ವಿಸ್ತೀರ್ಣ	ಪರಿಷ್ಕೃತ ದರ
11ಇ ನಕ್ಷೆ, ಅಲಿನೇಷನ್ ಪೂರ್ವ ನಕ್ಷೆ ಮತ್ತು ತತ್ಕಾಲ್ ಪೋಡಿ.	ಗ್ರಾಮೀಣ ಪ್ರದೇಶ	(1) 2 ಎಕರೆವರೆಗೂ	ರೂ.2000/-
		(2) 2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ರೂ.400/- ಹೆಚ್ಚುವರಿ ಶುಲ್ಕ, ಗರಿಷ್ಟ ಶುಲ್ಕ ರೂ.4000/- ಕ್ಕೆ ಮಿತಿಗೊಳಿಸಿದೆ.
	ನಗರ ಪ್ರದೇಶ	(1) 2 ಎಕರೆವರೆಗೂ	ರೂ.2500/-
		(2) 2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ರೂ.1000/- ಹೆಚ್ಚುವರಿ ಶುಲ್ಕ, ಗರಿಷ್ಟ ಶುಲ್ಕ ರೂ.5000/- ಕ್ಕೆ ಮಿತಿಗೊಳಿಸಿದೆ.
ಹದ್ದುಬಸ್ತು	ಗ್ರಾಮೀಣ ಪ್ರದೇಶ	(1) 2 ಎಕರೆವರೆಗೂ	ರೂ.1500/-
		(2) 2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ರೂ.300/- ಹೆಚ್ಚುವರಿ ಶುಲ್ಕ- ಗರಿಷ್ಟ ಶುಲ್ಕ ರೂ.3000/- ಕ್ಕೆ ಮಿತಿಗೊಳಿಸಿದೆ.
	ನಗರ ಪ್ರದೇಶ	(1) 2 ಎಕರೆವರೆಗೂ	ರೂ.2000/-
		(2) 2 ಎಕರೆಗಿಂತ ಹೆಚ್ಚು	ಪ್ರತಿ ಎಕರೆಗೆ ರೂ.400/- ಹೆಚ್ಚುವರಿ ಶುಲ್ಕ. ಗರಿಷ್ಟ ಶುಲ್ಕ ರೂ.4000/- ಕ್ಕೆ ಮಿತಿಗೊಳಿಸಿದೆ.

		ಸಾರ್ವಜನಿಕರಿಂದ ಸಂಗ್ರಹವಾಗುವ ಅರ್ಜಿ ಶುಲ್ಕದ ಹೆಚ್ಚಿನ ಮೊತ್ತವನ್ನು ಅಳತೆ ಕಾರ್ಯ ನಿರ್ವಹಿಸುವ ಪರವಾನಗಿ ಭೂಮಾಪಕರಿಗೆ ಪಾವತಿಸಲಾಗುತ್ತಿದೆ. ಈ ಹಿಂದೆ ಪ್ರತಿ ಅರ್ಜಿಯ ಅಳತೆಗೆ ಪರವಾನಗಿ ಭೂಮಾಪಕರಿಗೆ ನೀಡುತ್ತಿದ್ದ ರೂ.800/- ಗಳ ಸೇವಾ ಶುಲ್ಕವನ್ನು ದಿನಾಂಕ: 10.01.2022ರ ಸರ್ಕಾರದ ಆದೇಶದಲ್ಲಿ ರೂ.1200/- ಕ್ಕೆ ಮತ್ತು ಪ್ರತಿ ಹೆಚ್ಚುವರಿ ಬ್ಲಾಕ್‌ಗೆ ರೂ.150/- ರಿಂದ ರೂ.200/- ಕ್ಕೆ ಹೆಚ್ಚಿಸಲಾಗಿತ್ತು. ಇದರ ಜೊತೆಗೆ ಮೋಜಿಣಿ ವ್ಯವಸ್ಥೆಯ ಪರಿಕರಗಳ ನಿರ್ವಹಣೆ ಮತ್ತು ಆಡಳಿತಾತ್ಮಕ ವೆಚ್ಚವನ್ನು ಸಹ ಭರಿಸಬೇಕಾಗಿದ್ದು, ಈ ಎಲ್ಲಾ ಕಾರಣಗಳಿಂದಾಗಿ ಮೋಜಣಿ ವ್ಯವಸ್ಥೆಯಡಿ ಸಲ್ಲಿಸುವ ಅರ್ಜಿಗಳ ಅಳತೆ ಶುಲ್ಕವನ್ನು ಹೆಚ್ಚಿಸಲಾಗಿತ್ತು.
ಈ)	ಶುಲ್ಕ ಕಡಿಮೆ ಮಾಡಲು ಸರ್ಕಾರ ಚಿಂತನೆ ನಡೆಸಿದೆಯೇ?	ಹೌದು. ಸರ್ಕಾರದ ಆದೇಶ ಸಂಖ್ಯೆ: ಕಂಇ 238 ಎಸ್‌ಎಸ್‌ಸಿ 2021, ದಿನಾಂಕ: 09-02-2022 ರಲ್ಲಿ ಅರ್ಜಿ ಶುಲ್ಕವನ್ನು ಈ ಕೆಳಕಂಡಂತೆ ಕಡಿಮೆಗೊಳಿಸಲಾಗಿದೆ.

ವಿವರ		ಮರು ಪರಿಷ್ಕೃತ ದರ	
ಅರ್ಜಿಯ ವಿಧ	**ಜಮೀನು ಇರುವ ಪ್ರದೇಶ**	**2 ಎಕರೆ ವರೆವಿಗೂ**	**ಪ್ರತಿ ಹೆಚ್ಚುವರಿ ಎಕರೆಗೆ**
11ಇ,ಅಲಿನೇಷನ್ ಪೂರ್ವ ನಕ್ಷೆ, ತತ್ಕಾಲ್ ಪೋಡಿ	ಗ್ರಾಮೀಣ ಪ್ರದೇಶ	ರೂ.1500/-	ರೂ. 400/-
	ನಗರ ಪ್ರದೇಶ	ರೂ.2,500/	ರೂ.1000/-
ಹದ್ದುಬಸ್ತು	ಗ್ರಾಮೀಣ ಪ್ರದೇಶ	ರೂ.500/-	ರೂ. 300/-
	ನಗರ ಪ್ರದೇಶ	ರೂ.2,000/-	ರೂ. 400/-

ಸಂಖ್ಯೆ: ಕಂಇ 82 ಎಸ್‌ಎಸ್‌ಸಿ 2022

(ಆರ್.ಅಶೋಕ)
ಕಂದಾಯ ಸಚಿವರು